## ಹೊಸ ಶಿಕ್ಷಣನೀತಿಯ ಗಾಳಿ-ಬೆಳಕು

ಸಮಕಾಲೀನ ಸಂದರ್ಭದ ಅಗತ್ಯಗಳಿಗೆ ತಕ್ಕಂತೆ ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರ ಬದಲಾಣೆಗಳನ್ನು ತರುವ ಉದ್ದೇಶದಿಂದ ರೂಪಿಸಿರುವ 'ರಾಷ್ಟ್ರೀಯ ಶಿಕ್ಷಣ ನೀತಿ'ಯನ್ನು (ಎನ್‌ಇಪಿ 2020) ಕರ್ನಾಟಕ ಸರ್ಕಾರ ಈ ಶೈಕ್ಷಣಿಕ ಸಾಲಿನಿಂದಲೇ ಅನುಷ್ಠಾನಗೊಳಿಸಿದೆ. ಹೊಸ ನೀತಿ ಸದ್ಯಕ್ಕೆ ಉನ್ನತ ಶಿಕ್ಷಣ ಹಂತದಲ್ಲಿ ಮಾತ್ರ ಜಾರಿಗೆ ಬಂದಿದೆ.

ಹೊಸ ನೀತಿಯನ್ನು ಪೂರ್ಣಪ್ರಮಾಣದಲ್ಲಿ ಅಳವಡಿಸಿಕೊಳ್ಳಲು 2030ರವರೆಗೂ ಕಾಲಾವಕಾಶ ಇದೆ. ಅನುಷ್ಠಾನ ಕಾರ್ಯಪಡೆಯ ಶಿಫಾರಸಿನಂತೆ ಶಾಲೆಗಳಲ್ಲಿ ಹಂತಹಂತವಾಗಿ ಅಳವಡಿಸಿಕೊಳ್ಳಲಾಗುವುದು. ಆಯ್ದ ಶಾಲೆಗಳಲ್ಲಿ ಮುಂದಿನ ವರ್ಷದಿಂದಲೇ ಹೊಸ ನೀತಿ ಜಾರಿಗೆ ಬರಲಿದೆ ಎಂದು ರಾಜ್ಯ ಸರ್ಕಾರ ತಿಳಿಸಿದೆ. ಉನ್ನತ ಶಿಕ್ಷಣ ಹಂತದ ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಹೊಸ ನೀತಿಯ ಆಶಯ ಮತ್ತು ಅದು ತರಲು ಉದ್ದೇಶಿಸಿರುವ ಕೆಲವು ಸುಧಾರಣೆಗಳು ಮಹತ್ವಪೂರ್ಣವಾಗಿವೆ ಮತ್ತು ಈ ಕಾಲದ ಅಗತ್ಯಗಳಿಗೆ ಅನುಗುಣವಾಗಿಯೂ ಇವೆ. ಆದರೆ, ಈ ಆಶಯಗಳನ್ನು ಬೋಧಕ ವರ್ಗ ಮತ್ತು ವಿದ್ಯಾರ್ಥಿ ಸಮೂಹಕ್ಕೆ ಮನದಟ್ಟು ಮಾಡಿಸಿ, ಅದಕ್ಕೆ ಬೇಕಾದ ತರಬೇತಿ ಹಾಗೂ ಸಿದ್ಧತೆಗಳ ಬಗ್ಗೆ ಯೋಚಿಸದೆ ಅವಸರದಲ್ಲಿ ಅನುಷ್ಠಾನ ಮಾಡಿರುವ ರೀತಿ ಕುರಿತು ಟೀಕೆಗಳು ವ್ಯಕ್ತವಾಗಿವೆ.

4

ಹೊಸ ರೀತಿಯ ಬಹುಶಿಸ್ತೀಯ ಕಲಿಕೆಯ ಬಗ್ಗೆ ಈ ಶಿಕ್ಷಣ ನೀತಿಯಲ್ಲಿ ಕೆಲವು ಒಳ್ಳೆಯ ಅಂಶಗಳ ಪ್ರಸ್ತಾಪವಿದೆ. ಕೇವಲ ಉರು ಹೊಡೆಯುವ ಮಾದರಿಯ ಕಲಿಕೆಯ ವಿಧಾನಗಳನ್ನು ಬಿಟ್ಟು ಬೇರೊಂದು ಬಗೆಯ ಕ್ರಿಯಾತ್ಮಕ ಕಲಿಕೆಯನ್ನು ಒದಗಿಸಬೇಕೆಂಬ ಉದ್ದೇಶವು ಸ್ವಾಗತಾರ್ಹ. ಆದರೆ ಈ ಸಂಕಲ್ಪ ಈಡೇರಿಕೆಗೆ ಬೇಕಾದ ನುರಿತ ಮತ್ತು ಬದ್ಧತೆಯುಳ್ಳ ಸಂಪನ್ಮೂಲದ ತೀವ್ರ ಅಭಾವ ನಮ್ಮ ಉನ್ನತ ಶಿಕ್ಷಣ ಕ್ಷೇತ್ರವನ್ನು ಕಾಡುತ್ತಿರುವುದು ಸುಳ್ಳಲ್ಲ. ನಮ್ಮ ಹೆಚ್ಚಿನ ಕಾಲೇಜುಗಳಿಗೆ ಅತಿಥಿ ಉಪನ್ಯಾಸಕರೇ ಈಗಲೂ ಊರುಗೋಲಾಗಿದ್ದಾರೆ.

ಹೊಸ ನೀತಿ ಪ್ರಸ್ತಾಪಿಸಿರುವ ಕೆಲವು ಒಳ್ಳೆಯ ಅಂಶಗಳನ್ನು ಗ್ರಹಿಸಿ, ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಾಮರ್ಥ್ಯ ಎಷ್ಟು ಶಿಕ್ಷಣ ಸಂಸ್ಥೆಗಳಿಗೆ ಇದೆ? ದೇಶದ ಬಹಪಾಲು ವಿಶ್ವವಿದ್ಯಾಲಯಗಳು ಅವನತಿಯ ಹಾದಿ ಹಿಡಿದು ದಶಕಗಳೇ ಕಳೆದಿವೆ. ಹೊಸ ನೀತಿಯು ವಿಶ್ವವಿದ್ಯಾಲಯಗಳ ಪತನವನ್ನು ತಡೆದು, ಅವುಗಳನ್ನು ಮತ್ತೆ ಮೇಲಕ್ಕೆ ಎತ್ತಬಲ್ಲುದೇ ಎಂಬುದು ಯಕ್ಷಪ್ರಶ್ನೆ.



5

## ಗರಿಗೆದರಿದ 'ಸ್ಪೇಸ್ ಟೂರಿಸಂ'

2021ರಲ್ಲಿ ಉಳಿದೆಲ್ಲ ಕ್ಷೇತ್ರಗಳನ್ನು ಕೋವಿಡ್ ಕಾಡಿದರೂ ಬಾಹ್ಯಾಕಾಶ ಪ್ರವಾಸೋದ್ಯಮ (ಸ್ಪೇಸ್ ಟೂರಿಸಂ) ಮಾತ್ರ ಗರಿ ಬಿಚ್ಚಿದೆ. ಬಿಲಿಯನೇರ್‌ಗಳು ಈ ಕ್ಷೇತ್ರದಲ್ಲಿ ದುಡ್ಡು ಸುರಿಯುತ್ತಿದ್ದು, ಕೋಟ್ಯಂತರ ರೂಪಾಯಿ ಖರ್ಚು ಮಾಡಬಲ್ಲ ಸಾಮರ್ಥ್ಯವಿದ್ದವರು ಬಾನಿನಲ್ಲಿ ತೇಲಾಡಿ ನೀಲಿ ಭೂಮಿಯನ್ನು ನೋಡಿ, ಕಿರು ಗುರುತ್ವದ, ಕೃತಕ ಉಸಿರಾಟ ವ್ಯವಸ್ಥೆಯಲ್ಲಿ ಓಲಾಡಿ ಬರುತ್ತಿದ್ದಾರೆ. ಸಂದು ಹೋಗುತ್ತಿರುವ ಈ ವರ್ಷದಲ್ಲಿ ಬಾನಗಾಡಿಗಳು ಒಟ್ಟಾರೆ 13 ಟ್ರಿಪ್‌ಗಳಲ್ಲಿ ಪ್ರವಾಸಿಗರನ್ನು ಕರೆದೊಯ್ದು ಬಾಹ್ಯಾಕಾಶ ತೋರಿಸಿಕೊಂಡು ಬಂದಿವೆ.

6

'ವರ್ಜಿನ್ ಗೆಲಾಕ್ಟಿಕ್' ಕಂಪನಿಯ ಸ್ಥಾಪಕ ರಿಚರ್ಡ್ ಬ್ರಾನ್ಸನ್, 'ಬ್ಲೂ ಒರಿಜಿನ್' ಕಂಪನಿಯ ಮಾಲೀಕ ಜೆಫ್ ಬೆಜೋಸ್ ಹಾಗೂ 'ಸ್ಪೇಸ್ ಎಕ್ಸ್'ನ ಎಲಾನ್ ಮಸ್ಕ್, ಸ್ಪೇಸ್ ಟೂರ್ ಆಯೋಜಿಸುತ್ತಿರುವ ಪ್ರಮುಖ ಉದ್ಯಮಿಗಳು. ವಿಮಾನದ ಟಿಕೆಟ್‌ಗಳಂತೆ ಬಾನ ಪ್ರವಾಸದ ಟಿಕೆಟ್‌ಗಳನ್ನು ಮಾರುವ ದಿನಗಳನ್ನೂ ತಂದ ವರ್ಷ ಇದಾಗಿದೆ.

ವರ್ಜಿನ್ ಗೆಲಾಕ್ಟಿಕ್ ಕಂಪನಿಯ 90 ನಿಮಿಷ ಪಯಣದ ಒಂದೊಂದೂ ಸೀಟಿನ ದರ ಬರೋಬ್ಬರಿ ಎರಡೂವರೆ ಲಕ್ಷ ಡಾಲರ್ – ಅಂದರೆ ಹತ್ತಿರ ಹತ್ತಿರ ಎರಡು ಕೋಟಿ ರೂಪಾಯಿ! ರಿಚರ್ಡ್ ಬ್ರಾನ್ಸನ್‌ಗೆ ಈಗ 71ರ ಹರೆಯ. ಕಂಪನಿಯ ಆರು ಸಹವರ್ತಿಗಳೊಡನೆ (ಅವರಲ್ಲೊಬ್ಬಳು ಭಾರತೀಯ ಸಂಜಾತೆ ಶಿರೀಷಾ ಬಾಂಡ್ಲ) 'ಯುನಿಟ 22' ಎಂಬ ಬಾನಗಾಡಿಯಲ್ಲಿ ಅವರು ಬಾಹ್ಯಾಕಾಶ ಪ್ರವಾಸ ಮಾಡಿಬಂದರು.

ಅಮೆರಿಕದ ವಿಜ್ಞಾನ ಕಥಾಲೋಕದ ಮೀಡಿಯಾ ಫ್ರ್ಯಾಂಚೈಸಿ ಎನಿಸಿದ 'ಸ್ಟಾರ್ ಟ್ರೆಕ್'ನ ಕ್ಯಾಪ್ಟನ್ ಜೇಮ್ಸ್ ಟಿ. ಕಿರ್ಕ್ ಪಾತ್ರಕ್ಕೆ ಬಣ್ಣ ಹಚ್ಚಿದ್ದ ನಟ ವಿಲಿಯಂ ಶೆಟ್ನರ್ ತಮ್ಮ 90ನೇ ವಯಸ್ಸಿನಲ್ಲಿ ಬಾಹ್ಯಾಕಾಶ ಪ್ರವಾಸ ಮಾಡಿ ಬಂದರು. ಇಂತಹ ಪ್ರವಾಸ ಮಾಡಿದ ಅತ್ಯಂತ ಹಿರಿಯ ವ್ಯಕ್ತಿ ಎಂಬ ಹಿರಿಮೆಗೂ ಪಾತ್ರರಾದರು.




ಬಾಹ್ಯಾಕಾಶ ಪ್ರವಾಸಕ್ಕೆ ಸಜ್ಜಾಗಿರುವ ಮಾರ್ಕ್ ಬೆಜೋಸ್, ಜೆಫ್ ಬೆಜೋಸ್, ವಾಲಿ ಫಂಕ್